ರಾಜೇಂದ್ರ ಪ್ರಸಾದ್, ‘‘ವ್ಹಾಟ್ ಎನೆಕ್ಸೆಲೆಂಟ್ ಐಡಿಯಾ ಸಾರ್. ನೋ ಅದರ್ ವರ್ಡ್ಸ್ ಸಾರ್.’’ ಎಂದು ತಾರೀಫು ಮಾಡಿದ್ದರು. ‘‘ಅಷ್ಟ್ ಮಾಡ್ರಿ ಪೆಂಚಾಲಯ್ಯ, ಸಾಹೇಬ್ರು ದೊಡ್ಡ ಮನಸ್ಸು ಮಾಡಿದಾರೆ.’’ ಎಂದ ಮಾತಿಗೆ ಪೆಂಚಾಲಯ್ಯ ಇಬ್ಬರು ಸಾಹೇಬರಿಗೂ ಕೈಜೋಡಿಸಿ ನಮಸ್ಕರಿಸಿ ಚೆಂಬರಿನಿಂದ ಹೊರಬಂದಿದ್ದ. ಖುಷಿಯಿಂದ ಪೆಂಚಾಲಯ್ಯನ ಕಣ್ಣುಗಳು ತೇವಗೊಂಡಿದ್ದವು.

ಕಮಿಷನರ್ ಚೇಂಬರಿನಿಂದ ಹೊರಗೆ ಬಂದ ಪೆಂಚಾಲಯ್ಯ ಕೂಡಲೇ ಊರಿನಲ್ಲಿರುವ ತನ್ನ ದೊಡ್ಡಪ್ಪನ ಮಗನೂ, ಹಾಲಿ ಮಂಡಲ್ ಪಂಚಾಯ್ತಿ ಮೆಂಬರ್ರು ಆಗಿರುವ ತಿಪ್ಪೇರಂಗಯ್ಯನಿಗೆ ಫೋನ್ ಮಾಡಿದ್ದ. ಆ ಕಡೆಯಿಂದ ತಿಪ್ಪೇರಂಗಯ್ಯನು, ‘‘ಏನ್ ಪೆಂಚಾಲ್ ಸಮಾಚಾರ ಶ್ಯಾನೆ

